
# ಮಾತು-ಕತೆ

ಎಚ್.ಎಸ್. ರಾಘವೇಂದ್ರ ರಾವ್ ವಿಮರ್ಶೆ, ಅನುವಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರು. 'ವಿಶ್ಲೇಷಣೆ', 'ನಿಲುವು', 'ಹಾಡೆ ಹಾದಿಯ ತೋರಿತು', 'ತರು ತಳೆದ ಪುಷ್ಟ', 'ಚಕ್ರವರ್ತಿಯ ಬಟ್ಟೆಗಳು', 'ಬಾಲ ಮೇಧಾವಿ', 'ಶಿಕ್ಷಣ ಮತ್ತು ಜೀವನ', 'ಕಪ್ಪು ಕವಿತೆ', 'ಇರುವೆಗಳು ಮತ್ತು ಇತರ ಕಥೆಗಳು', 'ಸಂಸ್ಕೃತಿ ಸಂಗತಿ' ಅವರ ಕೆಲವು ಪುಸ್ತಕಗಳು.



'ಕಥೆಯಾದಳು ಹುಡುಗಿ' ಕಥೆ ಪಕ್ಕಕ್ಕೆ ಸರಿದು ತಾತ್ಕಾಲಿಕ ಪದ್ಯಗಳು ಯಾಕೆ ಮುಂದಕ್ಕೆ ಬರುತ್ತವೆ? ಅಂದರೆ ನಮ್ಮ ಚರ್ಚೆ ಯಾವುದನ್ನು ಒಳಗೆ ತೆಗೆದುಕೊಳ್ಳುತ್ತಿದೆ, ಯಾವುದನ್ನು ಹೊರಗಿಡುತ್ತದೆ – ಇವುಗಳ ಹಿಂದಿನ ರಾಜಕಾರಣ ಯಾವ ಬಗೆಯದು? ಇದು ಕೇವಲ ಸಾಹಿತ್ಯಿಕ ರಾಜಕಾರಣ ಮಾತ್ರವಲ್ಲ, ಇದರಾಚೆಗೆ ಅಭಿರುಚಿಗಳ ನಿರ್ಮಾಣ ಹಾಗೂ ಅಭಿರುಚಿಗಳ ನಿರ್ನಾಮ ಆಗುತ್ತಿರುತ್ತದೆ. ಇದು ಯಾಕಾಗುತ್ತೆ?''

ಕನ್ನಡದ ಲೇಖಕರನ್ನು ಕಾಡುವ ಕಾಳಜಿಗಳನ್ನು, ಸಂಗತಿಗಳನ್ನು ಎಚ್‌ಎಸ್‌ಆರ್ ವಿವರವಾಗಿ ಹಂಚಿಕೊಂಡರು.

``ನಮ್ಮ ನವ್ಯರ ಕಾಲದ ವಿಮರ್ಶೆಯನ್ನು ಇವತ್ತು ಮತ್ತೆ ಓದಿದರೆ, ಒಬ್ಬ ಲೇಖಕ ತುಂಬಾ ದೊಡ್ಡವನೆಂದು ಅವನಿಗೆ ರಿಯಾಯಿತಿ ಕೊಡಬೇಕು ಅಥವಾ ಹೊಸಬನೆಂದು ಪ್ರೋತ್ಸಾಹಿಸಬೇಕು ಎನ್ನುವಂಥ ಸಂಗತಿಗಳು ಗೌಣವಾಗಿದ್ದವು. ಆಗ ಕೃತಿ ಮುಖ್ಯವಾಗಿತ್ತು. ಒಬ್ಬ ಸಮರ್ಥನಾದ ವ್ಯಕ್ತಿ ಬರೆದರೆ ಅದನ್ನು ಬಹಳಷ್ಟು ಜನ ನಂಬುತ್ತಿದ್ದರು. ಸಾಹಿತ್ಯಕ್ಕೆ ಸಾಹಿತ್ಯೇತರ ಅಥವಾ ರಾಜಕೀಯ ಕಾರಣಗಳು ಮುಖ್ಯವಾಗುತ್ತಾ ಹೋದಂತೆ ಬಹಳಷ್ಟು ಲೇಖಕರು ಪೊಲಿಟಿಕಲಿ ಕರೆಕ್ಟ್ ಆಗುವುದು ಹೆಚ್ಚಾಯಿತು.

ಇನ್ನು ಅಭಿರುಚಿ ನಿರ್ಮಾಣದ ಸಂಗತಿ. ಅಭಿರುಚಿ ನಿರ್ಮಾಣ ಮಾಡುವುದು ಎಂದರೆ ಹೇಗೆ? ಸಾಮಾಜಿಕ ಜಾಲತಾಣಗಳು, ಪತ್ರಿಕೆಗಳು, ವಾಹಿನಿಗಳು – ಇಷ್ಟೆಲ್ಲ ಮಾಧ್ಯಮಗಳು ಇರುವ ಸಂದರ್ಭದಲ್ಲಿ ಒಂದು ಸಮಾಜದಲ್ಲಿ ಅಭಿರುಚಿ ನಿರ್ಮಾಣ ಮಾಡುವುದು ಎಂದರೇನು? ಈಗ ಒಂದು ಸಾಹಿತ್ಯ ಕೃತಿಯನ್ನು ಸಾಹಿತ್ಯ ಕೃತಿಯಾಗಿ ನೋಡುವ ಪರಿಪಾಠ ಇಲ್ಲ. ಇವತ್ತು ಒಂದು ಕಾದಂಬರಿ, ಕಥೆ, ಕವಿತೆ ತೆಗೆದುಕೊಂಡರೆ ಅದರಲ್ಲಿ ಸಾಹಿತ್ಯಕ್ಕಿಂತಲೂ ಸಮಾಜಶಾಸ್ತ್ರ ಹೆಚ್ಚಾಗಿ ಕಾಣಿಸುತ್ತೆ.

ಪ್ರತಿಯೊಬ್ಬ ಲೇಖಕನಿಗೂ ಅವನದೇ ಆದ ಕನ್ಸರ್ನ್ ಇದ್ದೇ